ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **473**

ಸದಸ್ಯರ ಹೆಸರು : ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 24-09-2020

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

***

	ಪ್ರಶ್ನೆ	ಉತ್ತರ
ಅ)	ಶರಾವತಿ ಭೂಗರ್ಭ ಜಲವಿದ್ಯುತ್ ಯೋಜನೆಯ ಡಿಪಿಆರ್ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಈ ಯೋಜನೆಯ ವಿವರಗಳೇನು?	ಕೆಪಿಸಿಎಲ್ 2000 ಮೆ.ವ್ಯಾ. ಸ್ಥಾಪಿತ ಸಾಮರ್ಥ್ಯದೊಂದಿಗೆ ಶರಾವತಿ ಪಂಪ್ಡ್ ಶೇಖರಣಾ ಯೋಜನೆಯ ಅನುಷ್ಠಾನವನ್ನು ಕೈಗೊಳ್ಳಲು ಯೋಜಿಸುತ್ತಿದೆ. ಈ ನಿಟ್ಟಿನಲ್ಲಿ ಡಿಪಿಆರ್ ತಯಾರಿಸುವ ಕೆಲಸವನ್ನು ಮೆ: ವಾಪ್ಕೋಸ್ ರವರಿಗೆ ನೀಡಲಾಗಿದೆ. ಈ ಯೋಜನೆಯನ್ನು ಈಗಿರುವ ಜಲಾಶಯಗಳ ನಡುವೆ, ತಲಕಳಲೆ ಜಲಾಶಯವನ್ನು ಮೇಲುಭಾಗ ಜಲಾಶಯವಾಗಿ ಮತ್ತು ಗೇರುಸೊಪ್ಪ ಜಲಾಶ್ಯಯವನ್ನು ಕೆಳಭಾಗದ ಜಲಾಶಯವಾಗಿ ಜಾರಿಗೆ ತರಲು ಉದ್ಧೇಶಿಸಲಾಗಿದೆ, ಎರಡು ಜಲಾಶಯಗಳ ನಡುವೆ ಏಳು ಕೀಲೋ ಮೀಟರ್ ಉದ್ದದ ನೀರು ಸಾಗಿಸುವ ಸುರಂಗವನ್ನು ಪ್ರಸ್ತಾಪಿಸಲಾಗಿದೆ ಮತ್ತು 250 ಮೆ.ವ್ಯಾ , ಸಾಮರ್ಥ್ಯದ 8 ಸಂಖ್ಯೆಯ ರಿವರ್ಸಿಬಲ್ ಪಂಪ್ ಜನರೇಟರ್‌ಗಳ ಭೂಗರ್ಭ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ.
ಆ)	ಶರಾವತಿ ಅಂತರ್‌ಗತ ಯೋಜನೆಯಿಂದ ಎಷ್ಟು ಮೆ.ವ್ಯಾ.ವಿದ್ಯುತ್ ಉತ್ಪಾದನೆಯಾಗಲಿದೆ; ಈ ಯೋಜನೆಗೆ ಎಷ್ಟು ಖರ್ಚಾಗಲಿದೆ (ವಿವರ ನೀಡುವುದು)	2000 ಮೆ.ವ್ಯಾ ಉದ್ಧೇಶಿತ ಶರಾವತಿ ಪಂಪ್ಡ್ ಶೇಖರಣಾ ಯೋಜನೆಯಿಂದ ಸುಮಾರು ವಾರ್ಷಿಕವಾಗಿ 4380 ದಶಲಕ್ಷ ಯುನಿಟ್ ಉತ್ಪಾದಿಸಬಹುದು. 2017ರಲ್ಲಿ ಸಿದ್ಧಪಡಿಸಿದ ಪಿಎಫ್‌ಆರ್ ಪ್ರಕಾರ, ಯೋಜನೆಯ ವೆಚ್ಚ ಸುಮಾರು ರೂ.5391.51 ಕೋಟಿ ಎಂದು ಅಂದಾಜಿಸಲಾಗಿದೆ.
ಇ)	ಶರಾವತಿ ಅಂತರ್‌ಗತ ಯೋಜನೆಯ ಜಿಯೋ ಟೆಕ್ನಿಕಲ್ ಸರ್ವೆ ನಡೆಸಲಾಗಿದೆಯೇ; ನಡೆಸಿದ್ದಲ್ಲಿ ಅದರ ತಾಂತ್ರಿಕ ವರದಿಗಳೇನು?	ಅರಣ್ಯ ಇಲಾಖೆಯಿಂದ ಜಿಯೋಟೆಕ್ನಿಕಲ್ ಸಮೀಕ್ಷೆಯ ಕಾರ್ಯಗಳನ್ನು ನಡೆಸಲು ದಿನಾಂಕ:06.05.2020 ರಂದು ಅನುಮೋದನೆಯನ್ನು ಪಡೆಯಲಾಗಿದೆ ಮತ್ತು ಜಿಯೋಟೆಕ್ನಿಕಲ್ ತನಿಖಾ ಕಾರ್ಯಗಳು ಪ್ರಗತಿಯಲ್ಲಿವೆ.
ಈ)	ಶರಾವತಿ ಭೂಗರ್ಭ ಜಲವಿದ್ಯುತ್ ಯೋಜನೆಗೆ ಸ್ಥಳೀಯ ಜನರು ಮತ್ತು ಪರಿಸರವಾದಿಗಳಿಂದ ತೀವ್ರ ವಿರೋದ ವ್ಯಕ್ತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಸದರಿ ಯೋಜನೆಗೆ ಅರಣ್ಯ ಮತ್ತು ಪರಿಸರ ಇಲಾಖೆಯಿಂದ ಪರಿಸರ ಅನುಮೋದನೆಯನ್ನು ಪಡೆದ ನಂತರವೇ ಯೋಜನೆಯನ್ನು ಅನುಷ್ಠಾನದ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು.

ಸಂಖ್ಯೆ: ಎನರ್ಜಿ 186 ಇಬಿಎಸ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ